ವೇಣು ಅವರು ಬರಿ ಜನಪ್ರಿಯ ಕಾದಂಬರಿಕಾರರಷ್ಟೇ ಅಲ್ಲ. ಇಂದಿಗೂ ನಮ್ಮ ಸಮಾಜದ ಸ್ವಾಸ್ಥ್ಯವನ್ನು ಕದಡುತ್ತಿರುವ ಅಸಂಗತವೂ, ತರ್ಕಹೀನವೂ ಆದ ಸಾಮಾಜಿಕ ಮತ್ತು ಧಾರ್ಮಿಕ ವಿಚಾರಗಳ ಬಗ್ಗೆಯೂ ಸಂಪೂರ್ಣ ಭಿನ್ನಮತವನ್ನು ಹೊಂದಿರುವ ಲೇಖಕರೂ ಹೌದು. ವಸಾಹತುಶಾಹಿಯ ಬಗ್ಗೆ ಇರುವಷ್ಟೇ ಪ್ರತಿರೋಧ, ಈ ದೇಶದ ಪುರೋಹಿತಶಾಹಿಯ ಬಗೆಗೂ ವೇಣು ಅವರಿಗೆ ಇದೆ. ಖಾದರ್ ಖಾನ್ ಬ್ರಿಟಿಷ್ ಅಧಿಕಾರಿ ಡಾಬಸ್‌ಗೆ ಹೇಳುವ ಮಾತುಗಳು ಇಲ್ಲಿ ಉಲ್ಲೇಖಾರ್ಹ. 'ನಮ್ಮವರೂ ಹೊರಗಡೆಯಿಂದ್ಲೇ ಬಂದು ಆಳಿದರು. ಆದರೆ, ದೇಶನಾ ಹಾಳು ಮಾಡಲಿಲ್ಲ. ಇಲ್ಲೇ ಆಳಿದರು, ಇಲ್ಲೇ ಬಾಳಿದರು. ಇಲ್ಲಿಯೇ ಮಸೀದಿ, ಮೀನಾರ್, ಗುಂಬಜ್‌ಗಳನ್ನು ಕಟ್ಟಿದರು. ದೇಶವನ್ನೂ ಕಟ್ಟಿದರು. ನಿಮ್ಮ ಹಾಗೆ ಇಲ್ಲಿರೋದನ್ನೆಲ್ಲಾ ದೋಚಿ, ಇಂಗ್ಲೆಂಡಿಗೋ, ಲಂಡನ್ನಿಗೋ ಸ್ಕಾಟ್‌ಲೆಂಡಿಗೋ ಹಡಗುಗಳ ಮೂಲಕ ರವಾನೆ ಮಾಡಲಿಲ್ಲ...' (ಪು. 260).

> ವೇಣು ತಮ್ಮ ಕೃತಿಯಲ್ಲಿ 'ಹಿಂಸೆ' ಮತ್ತು 'ವಿಭಜನೆ'ಯನ್ನು ಬಿತ್ತುವ ಧರ್ಮವನ್ನು ನಿರಾಕರಿಸಿ, 'ದಯೆ ಮತ್ತು ಕಾರುಣ್ಯ'ವೇ ಧರ್ಮ ಎಂಬ ಶೂದ್ರ ಸಂಸ್ಕೃತಿಯ ಜೀವಪರ ಧರ್ಮವನ್ನು ಎತ್ತಿಹಿಡಿಯುತ್ತಾರೆ.

ಈ ಕಾದಂಬರಿಯಲ್ಲಿ ಯಾವುದೇ ಕೇಂದ್ರ ಪಾತ್ರ ಇಲ್ಲ. ಹಾಗೆಯೇ ಇಲ್ಲಿ ಯಾರೂ ಅಮುಖ್ಯರಲ್ಲ! ಬಿಡುಗಡೆಯ ಹೋರಾಟದಲ್ಲಿ ಎಲ್ಲರೂ ಮುಖ್ಯರೇ ಎಂಬುದನ್ನು ಕಾದಂಬರಿಯ ವಿವರಗಳು ಮತ್ತೆಮತ್ತೆ ನಮ್ಮ ಅರಿವಿಗೆ ತರುತ್ತವೆ. ಕಾದಂಬರಿಯ ಕೇಂದ್ರ ಆಶಯವೇ 'ವಿಮೋಚನೆ'. ಈ ವಿಮೋಚನೆ ಎರಡು ಬಗೆಯಲ್ಲಿ ಇಲ್ಲಿ ಮೈದಾಳಿದೆ. ಮೊದಲನೆಯದು: ವಸಾಹತುಶಾಹಿಯ ಕ್ರೌರ್ಯದ ಆಡಳಿತದಿಂದ ವಿಮೋಚನೆ ಹೊಂದುವುದು. ಎರಡನೆಯದು: ಈ ದೇಶದ ಪುರೋಹಿತಶಾಹಿ ಬಿತ್ತಿರುವ ಶ್ರೇಣೀಕೃತ ಜಾತಿಪದ್ಧತಿ, ಶ್ರೇಷ್ಠತೆಯ ವ್ಯಸನ, ಆಹಾರದ ಬಗೆಗಿನ ತರತಮ ಭಾವಗಳ ಬೌದ್ಧಿಕ ದಬ್ಬಾಳಿಕೆಯಿಂದ ಪಡೆಯುವ ವಿಮೋಚನೆ. ಈ ಎರಡನ್ನೂ ಹದವಾಗಿ ಮಿಳಿತಗೊಳಿಸಿ ಕಾದಂಬರಿಕಾರರು ಕೃತಿಯಲ್ಲಿ ಧ್ವನಿಸಿದ್ದಾರೆ. ಭಾರತದ ಶೂದ್ರ ಸಂಸ್ಕೃತಿಯು 'ಧರ್ಮ' ಎಂದರೆ 'ದಯೆ, ಕಾರುಣ್ಯ, ಸಹಿಷ್ಣುತೆ' ಎಂದೇ ನಿರೂಪಿಸಿದೆ. ಆದರೆ, ಈಗಿನ ಹೊಸ ಭಾರತ 'ಧರ್ಮ' ಎಂದರೆ, 'ಹಿಂಸೆ', 'ಕ್ರೌರ್ಯ', 'ವಿಭಜನೆ' ಎಂದೇ ಸಮಾಜದ ನಡುವೆ ಬಿತ್ತುತ್ತಿದೆ. ವೇಣು ತಮ್ಮ ಕೃತಿಯಲ್ಲಿ 'ಹಿಂಸೆ' ಮತ್ತು 'ವಿಭಜನೆ'ಯನ್ನು ಬಿತ್ತುವ ಧರ್ಮವನ್ನು ನಿರಾಕರಿಸಿ, 'ದಯೆ ಮತ್ತು ಕಾರುಣ್ಯ'ವೇ ಧರ್ಮ ಎಂಬ ಶೂದ್ರ ಸಂಸ್ಕೃತಿಯ ಜೀವಪರ ಧರ್ಮವನ್ನು ಎತ್ತಿಹಿಡಿಯುತ್ತಾರೆ. ಹೀಗೆ ರಾಜಕೀಯ ವಿಮೋಚನೆಯ ಜೊತೆಗೆ, ಸಾಂಸ್ಕೃತಿಕ ವಿಮೋಚನೆ ಕೂಡ ಅವರಿಗೆ ಮುಖ್ಯವಾಗುತ್ತದೆ. ಈ ಕಾರಣಕ್ಕಾಗಿಯೇ ಅವರು ನಮ್ಮ ಜನಪ್ರಿಯ ಲೇಖಕರ ಸಾಲಿನಲ್ಲಿ ವಿಶಿಷ್ಟವಾಗಿ ನಿಲ್ಲುತ್ತಾರೆ.

'...ದೃಷ್ಟ ಸಮಾಜದ ವ್ಯವಸ್ಥೆಯಲ್ಲಿ ಸ್ಥಿತಿಗಳಲ್ಲಿ–ಅದು ಯಾವ ದೇಶದಲ್ಲೇ ಇರಲಿ, ಯಾವ ಭೂಖಂಡದಲ್ಲೇ ಇರಲಿ – ಜನ ಸಿಡಿದೇಳುವುದು ನಿಶ್ಚಯ. ಕ್ರೌರ್ಯಮರ್ದನಗಳಿಗೆ ಇದಿರಾಗಿ, ನ್ಯಾಯಕ್ಕೋಸ್ಕರ, ಒಳ್ಳೆಯ ಬದುಕಿಗೋಸ್ಕರ ಜನ ನಡೆಸುವ ಹೋರಾಟಕ್ಕೆ ಸಾವಿಲ್ಲ' ಎಂದು ನಿರಂಜನರು ತಮ್ಮ ಕಾದಂಬರಿ 'ಮೃತ್ಯುಂಜಯ'ದ ಮೊದಲ ಮಾತಿನಲ್ಲಿ ಹೇಳುವ ಮಾತುಗಳು ಇಲ್ಲಿ ಪ್ರಸ್ತುತ.